ಸಿಸಿ ಸಂಖ್ಯೆಃ 756/2022
ಪಿಡಬ್ಲ್ಯೂಃ 01
ದಿನಾಂಕಃ 24.03.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಎಫ್ ಸಿ ಹೆಚ್ ವಕೀಲರಿಂದಃ

ಆರೋಪಿ ನನ್ನ ಮಾವ. ಮಾವ ಅಂದರೆ ನನ್ನ ಅಕ್ಕನ ಗಂಡ. ನನ್ನ ತಂದೆ 3 ವರ್ಷದ ಹಿಂದೆ ಅನಾರೋಗ್ಯದ ನಿಮಿತ್ತ ತೀರಿಕೊಂಡಿರುತ್ತಾರೆ. ಈ ದೂರನ್ನು ನನ್ನ ತಂದೆಯೇ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಫೋತಿಯಾಗಿದ್ದರಿಂದ ನಾವು ವಾರಸಾ ನಾತೆಯಿಂದ ಈ ದೂರು ನಡೆಸುತ್ತಿದ್ದೇವೆ ಎಂದರೆ ಸರಿ. ನನ್ನ ತಂದೆಗೆ ನಾವು 4 ಜನ ವಾರಸುದಾರರು ಇರುತ್ತೇವೆ. ಅವರ ಹೆಸರು ದ್ರಾಕ್ಷಾಣವ್ವ ಬಸೆಟ್ಟೆಪ್ಪಗೌಡ ಪಟ್ಟಣಶೆಟ್ಟಿ, ಲಕ್ಷ್ಮೀ ಬಸನಗೌಡ ಪಾಟೀಲ, ಷಣ್ಮುಖಗೌಡ ಬಸೆಟ್ಟೆಪ್ಪಗೌಡ ಪಟ್ಟಣಶೆಟ್ಟಿ, ನಾಗನಗೌಡ ಬಸೆಟ್ಟೆಪ್ಪಗೌಡ ಪಟ್ಟಣಶೆಟ್ಟಿ, ನಾವು ಲಕ್ಷ್ಮೀಯನ್ನು ವಾರಸುದಾರರಳನ್ನಾಗಿ ಈ ಪ್ರಕರಣದಲ್ಲಿ ಹೆಸರು ನಮೂದು ಮಾಡಿಲ್ಲ ಎಂದರೆ ಸರಿ. ಲಕ್ಷ್ಮೀ ಸಹ ನನ್ನ ತಂದೆಗೆ ನೇರ ವಾರಸುದಾರಳು ಎಂದರೆ ಸರಿ. ಆರೋಪಿಗೆ ಸಂಬಂಧಿಸಿದಂತೆ ಬಿ ಎಚ್ ಬಿ ಸ್ವೀಟ್ಸ ಅ್ಯಂಡ್ ಕಾಂಡಿಮೆಂಟ್ಸ ಅಂತಾ ಶಿಗ್ಗಾಂವನಲ್ಲಿ ಫ್ಯಾಕ್ಟರಿ ಇತ್ತು ಎಂದರೆ ಸರಿ. ಸದರಿ ಫ್ಯಾಕ್ಟರಿಯಲ್ಲಿ ನಾನು ಮ್ಯಾನೇಜರ್ ಅಂತಾ ಕೆಲಸ ಮಾಡಿದ್ದೇನೆ ಎಂದರೆ ನಾನು ಕೆಲಸಗಾರರ ಜೊತೆ ಕೆಲಸಗಾರನಾಗಿ ಕೆಲಸ ಮಾಡಿದ್ದೇನೆ. ಆಗ ಆರೋಪಿಯ ಅಳಿಯ ಸಂಪೂರ್ಣ ಜವಾಬ್ದಾರಿ ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ, ಆರೋಪಿಯ ತಮ್ಮ ನೋಡಿಕೊಳ್ಳುತ್ತಿದ್ದ. ಆರೋಪಿ ನಾನು ಆತನ ಅಳಿಯನಾಗಿದ್ದರಿಂದ ಸದರಿ ಫ್ಯಾಕ್ಟರಿಯ ಸಂಪೂರ್ಣ ಜವಾಬ್ದಾರಿಯನ್ನು ನನಗೆ ವಹಿಸಿದ್ದ ಎಂದರೆ ಸರಿಯಲ್ಲ. ಆರೋಪಿ ದಿನನಿತ್ಯ ವ್ಯವಹಾರಕ್ಕೆ ಅಗತ್ಯವಾದ ಬ್ಯಾಂಕ್ ಚೆಕ್ಕಗಳಿಗೆ ಸಹಿ ಮಾಡಿ ನನಗೆ ಕೊಡುತ್ತಿದ್ದ ಎಂದರೆ ಸರಿಯಲ್ಲ. ಆರೋಪಿ ಕೊಡುತ್ತಿದ್ದ ದಾಖಲೆಗಳು ಈಗಲೂ ಸಹ ನನ್ನ ಹತ್ತಿರ ಇರುತ್ತವೆ ಎಂದರೆ ಸರಿಯಲ್ಲ. ಆರೋಪಿ ಮೆದುಳಿನ ತೊಂದರೆಯಾಗಿ ಕೋಮಾಕ್ಕೆ ಹೋಗಿ ಎಸ್ ಡಿ ಎಂ ಆಸ್ಪತ್ರೆಯಲ್ಲಿ ಒಳರೋಗಿ ಅಂತಾ ದಾಖಲಾಗಿದ್ದ ಎಂದರೆ ಸರಿ, ಸಾಕ್ಷಿ ಸ್ವತಃ ಆಗ ಆತ ಜವಾಬ್ದಾರಿಯನ್ನು ತನ್ನ ತಮ್ಮನಿಗೆ ವಹಿಸಿದ್ದ ಅಂತಾ ನುಡಿಯುತ್ತಾರೆ. ಆರೋಪಿ ಆಸ್ಪತ್ರೆಯಲ್ಲಿದ್ದಾಗ ಫ್ಯಾಕ್ಟರಿಯ ಎಲ್ಲಾ ವ್ಯವಹಾರಗಳನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ ಅವರ ತಮ್ಮ ಮಾಡುತ್ತಿದ್ದ. ನಾನು ಸರಿಯಾಗಿ ಕೆಲಸ ಮಾಡದೇ ಕೆಲಸಗಾರರ ಜೊತೆ ಜಗಳ ಮಾಡಿ ತೊಂದರೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ತೊಂದರೆ ಕೊಟ್ಟಿದ್ದರಿಂದ ಕೆಲಸಗಾರರು ಕೆಲಸ ಬಿಟ್ಟು ತಮ್ಮ ರಾಜ್ಯಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ, ಅವರಿಗೆ ಸಂಬಳ ಕೊಡಲು ಆಗದೇ ಇರುವುದರಿಂದ ಅವರು ಕೆಲಸ ಬಿಟ್ಟು ಹೋಗಿರುತ್ತಾರೆ ಅಂತಾ

ಸ್ವತಃ ನುಡಿಯುತ್ತಾರೆ. ನಾನು ಯಾವಾಗ ಫ್ಯಾಕ್ಟರಿ ಕೆಲಸಗಾರರ ಜೊತೆ ದುರ್ವರ್ತನೆ ಮಾಡುತ್ತಿದ್ದೆ ಆಗಿನಿಂದ ಮ್ಯಾನೇಜರ್ ಕೆಲಸದಿಂದ ತೆಗೆದರು ಎಂದರೆ ಸರಿಯಲ್ಲ. ಆತ ನನ್ನನ್ನು ಮ್ಯಾನೇಜರ್ ಕೆಲಸದಿಂದ ತೆಗೆದಿದ್ದಕ್ಕಾಗಿ ಅವರ ಮೇಲೆ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ಅವರ ಹೆಂಡತಿ ಹೆಸರಿನಲ್ಲಿ ಶಿಗ್ಗಾಂವನಲ್ಲಿ ಜಾಗ ಮತ್ತು ಮನೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮನೆಯನ್ನು ಆರೋಪಿ ಹೆಂಡತಿ ಕಡೆಯಿಂದ ಅಂದರೆ ನನ್ನ ಅಕ್ಕನ ಕಡೆಯಿಂದ ನನ್ನ ತಂದೆ ಅವಳಿಗೆ ಗೊತ್ತಾಗದಂತೆ ಭಕ್ಷಿಸ ಪತ್ರ ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಅವಳಾಗಿಯೇ ಬರೆದುಕೊಟ್ಟಿರುತ್ತಾಳೆ. ಅವಳಾಗಿ ಬರೆದುಕೊಟ್ಟಿರುತ್ತಾಳೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.